ಈಗ ಸಾಲಸೋಲ ಮಾಡಿ ಈ ಮಕ್ಕಳನ್ನು ಸಾಕುತ್ತಿದ್ದೇವೆ. ಇದಕ್ಕೆ ಬದಲು ಈ ಮಕ್ಕಳನ್ನು ಸರ್ಕಾರದ ಸಂಸ್ಥೆಗಳಿಗೆ ಸೇರಿಸಿಕೊಂಡು ಬಿಡಿ. ನಾವು ಕಳಿಸಿಕೊಡುತ್ತೇವೆ.

ಶ್ರೀ ಬಿ. ಶಿವಣ್ಣ:- ಇದನ್ನು ಪರಿಶೀಲನೆ ಮಾಡಿ ಅವರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ:- ಕಳೆದ ವರ್ಷ ಮಾರ್ಚಿ ತಿಂಗಳಲ್ಲಿ ಸುಮಾರು ಎರಡು ವಾರಗಳವರೆಗೆ ಗ್ರಾಂಟನ್ನು ತೆಗೆದುಕೊಳ್ಳುವುದಕ್ಕೋಸ್ಕರ ಕಛೇರಿಗಳಿಗೆ ಅಲೆದಲೆದು ಸಾಕಾಗಿಹೋಯಿತು. ಇದೇ ರೀತಿ ಮುಂದುವರಿಯುವುದಾದರೆ ದಯವಿಟ್ಟು ಆ ಮಕ್ಕಳನ್ನು ತಮ್ಮ ಹತ್ತಿರವೇ ಕರೆದುಕೊಳ್ಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್:- ಮಕ್ಕಳ ವಿಷಯ ಅವರಿಗೆ ಗೊತ್ತಿಲ್ಲ.

SRI M. RAJASHEKAR MURTHY:- This is one of the most important functions of the State Government. I will be liberal with regard to providing grants. I will see that the matter is set-right.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ರಾಜಶೇಖರಮೂರ್ತಿ ಅವರಿಗೆ ಇದರ ಕಷ್ಟ ಗೊತ್ತಿದೆ. ಆದ್ದರಿಂದ.....

ಅಧ್ಯಕ್ಷರು:- ಅವರು ಉತ್ತರ ಹೇಳಿದ ಮೇಲೆ ಶಿವಣ್ಣನವರನ್ನು ನೀವು ಬಿಟ್ಟುಬಿಡಿ.

ಶ್ರೀ ಬಿ. ಶಿವಣ್ಣ:- ಇದು ಮಾನ್ಯ ಸಿಂಧ್ಯರವರ ಕಾಲದಲ್ಲಿ ಆಗಿದ್ದು, ಅವರೇ ಮಾಡಬಹುದಾಗಿತ್ತು.

ಶ್ರೀ ವಾಟಾಳ್ ನಾಗರಾಜ್:- ಮಕ್ಕಳ ಕಷ್ಟ ಅವರಿಗೆ ಗೊತ್ತಾಗುವವರೆಗೆ ಈ ಇಲಾಖೆಯನ್ನು ಅವರಿಂದ ಬೇರ್ಪಡಿಸಿಕೊಡುವುದು ಒಳ್ಳೆಯದು.

ಮೊಳಕಾಲ್ಮೂರ ತಾಲ್ಲೂಕ್ ಡಾರ್ಕ್ ಏರಿಯ ಎಂದು ಘೋಷಣೆ ಮಾಡಿದ ಬಗ್ಗೆ.

1572 ಶ್ರೀ ಎನ್.ಬಿ.ನಾಯಕ್ (ಮೊಳಕಾಲ್ಮೂರು):- ಮಾನ್ಯ ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.:-

ಅ) ಮೊಳಕಾಲ್ಮೂರು ತಾಲ್ಲೂಕನ್ನು ಡಾರ್ಕ್ ಏರಿಯಾ ಎಂದು ಘೋಷಣೆ ಮಾಡಿರುವುದು ನಿಜವೆ;

ಆ) ಆದಕ್ಕೆ ಕಾರಣವೇನು?

ಇ) ಈಗ ಆ ಡಾರ್ಕ್ ಪ್ರದೇಶವನ್ನು ತೆಗೆಯಲು ಸರ್ಕಾರದವರು ತೆಗೆದುಕೊಂಡು ಕ್ರಮವೇನು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಸಚಿವರು):-

ಅ) ಹೌದು.

ಆ) ಈ ತಾಲ್ಲೂಕಿನಲ್ಲಿ 1-1-1987ರ ವೇಳೆಯ ಅಂದಾಜಿನಂತೆ ಅಂತರ್ಜಲದ ಬಳಕೆಯು ವಾರ್ಷಿಕ ನಿವ್ವಳ ಲಭ್ಯ. ಪ್ರಮಾಣದ ಶೇ.89ರಷ್ಟಿತ್ತು. ನಿಗದಿಯಾದ ಶೇ.85 ಕ್ಕೂ ಹೆಚ್ಚು ಬಳಕೆಯಾಗುತ್ತಿದ್ದ ಕಾರಣ, ಈ ತಾಲ್ಲೂಕನ್ನು ಕಪ್ಪು ಪ್ರದೇಶವೆಂದು ವರ್ಗೀಕರಿಸಲಾಯಿತು.

1989-90ನೇ ವರ್ಷದಲ್ಲಿ ಈ ತಾಲ್ಲೂಕಿನ ನೀರಾವರಿ ಬಾವಿಗಳಿಗೆ ಸಂಬಂಧಪಟ್ಟ ವಿವರಗಳನ್ನು ಸಂಗ್ರಹಿಸಿ ಮಾಡಿದ ಕಿರು ಜಲಾನಯನಾಧಾರಿತ ಅಂತರ್ಜಲ ಪುನರ್ ಮೌಲೀಕರಣೆ ಕೂಡ ಈ ತಾಲ್ಲೂಕು ಕಪ್ಪು ವರ್ಗದಲ್ಲೇ ಇರುವುದನ್ನು ದೃಢೀಕರಿಸಿದೆ. ಆದ್ದರಿಂದ ಈ ದಿಶೆಯಲ್ಲಿ ಯಾವದೇ ಕ್ರಮ ಅನಗತ್ಯ.

ಶ್ರೀ ಎಸ್.ಎಂ. ಯಾಹ್ಯಾ:- ಇದು ಮೈನ್ಸ್ ಆಂಡ್ ಜಿಯಾಲಾಜಿ ಇಲಾಖೆಗೆ ಬರುತ್ತದೆ. ಈ ಫೈಲ್ಲನ್ನು ಅವರಿಗೆ ಕಳುಹಿಸಿದ್ದೇವೆ. ಅವರು ಉತ್ತರ ಕೊಡಲಿ. ಇಲ್ಲದಿದ್ದರೆ ನಾನು ಇನ್ನೊಂದು ಸಲ ಉತ್ತರ ಕೊಡಬೇಕಾಗುತ್ತದೆ. ಇದಕ್ಕೆ ಯಾವ ಇಲಾಖೆಯವರು ಉತ್ತರ ಕೊಡಬೇಕೆಂಬ ಬಗ್ಗೆ ಸ್ವಲ್ಪ ಗೊಂದಲ ಇದೆ.

ಶ್ರೀ ಬಿ. ಶಿವಣ್ಣ:- ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಕೊಡುತ್ತೇನೆ. ಈ ಪ್ರದೇಶವನ್ನು ಡಾರ್ಕ್ ಏರಿಯಾ ಎಂದು ಒಂದು ಸಲ ಡಿಕ್ಲೇರ್ ಮಾಡಿದ ಮೇಲೆ ಮತ್ತೆ ಬದಲಾವಣೆ ಮಾಡಲು ಬರುವುದಿಲ್ಲ.

ಶ್ರೀ ಎನ್.ಬಿ. ನಾಯಕ್:- ಮಾನ್ಯ ಮಂತ್ರಿಗಳು ಬಳಕೆಯ ನೀರು ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಒಂದು ರಂಗನದುರ್ಗ ಪ್ರಾಜೆಕ್ಟ್ ಆಗಿದೆ. ಜಲ ಸ್ವಲ್ಪ ಮೇಲೆ ಬಂದಿದೆ. ರೈತರು ಕೆಲವರು ಸಾಹುಕಾರರು ಬೋರ್‌ವೆಲ್‌ಗಳನ್ನು ಹಾಕಿಸಿಕೊಂಡಿದ್ದಾರೆ. 6 ಇಂಚು, 5 ಇಂಚು, 4 ಇಂಚು ನೀರು ಬಿದ್ದಿದೆ. ಈಗ ಆದನ್ನು ಪರಿಶೀಲನೆ ಮಾಡಿ ಡಾರ್ಕ್ ಏರಿಯಾ ಎಂಬುದನ್ನು ತೆಗೆದು ಹಾಕಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ:- ಆದನ್ನು ಖಂಡಿತಾವಾಗಿ ನಾವು ಪರಿಶೀಲನೆ ಮಾಡುತ್ತೇವೆ. ಆ ಡಾರ್ಕ್ ಏರಿಯಾ ಈಗ ಗ್ರೀನ್ ಏರಿಯಾ ಆಗುತ್ತಿದೆ, ಅಲ್ಲಿ ನೀರು ಸಿಗುತ್ತಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಖಂಡಿತವಾಗಿ ಆದನ್ನು ಪರಿಶೀಲನೆ ಮಾಡಿ ಅಲ್ಲಿರತಕ್ಕ ಬಡವರಿಗೆ ನೀರಿ ಸಿಗುವಂತೆ ಮಾಡುತ್ತೇವೆ.

ಶ್ರೀ ಎನ್.ಜಿ. ನಾಯಕ್:- ಆದಷ್ಟು ಜಾಗ್ರತೆ ಮಾಡಬೇಕು. ಇದನ್ನು ಮಾಡಿದರೆ ಪಿ.ಎಲ್.ಡಿ ಬ್ಯಾಂಕ್‌ನಲ್ಲಿ ರೈತರಿಗೆ ಸಾಲ ಸಿಗುತ್ತದೆ. ಹಾಗೆ ಮಾಡಿದರೆ ಸಣ್ಣ ರೈತರಿಗೆ ಅನುಕೂಲವಾಗುತ್ತದೆ. ಇದು ಬಡ ಕ್ಷೇತ್ರವಾಗಿದೆ, ಇಲ್ಲಿ ಹರಿಜನ ಗಿರಿಜನರು ಹಾಗೂ ಬಡ ರೈತರು ಇದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಸ್ವಲ್ಪ ನಿಗಾ ಇಟ್ಟು ಆದಷ್ಟು ಜಾಗ್ರತೆ ಈ ಕೆಲಸ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ:- ಅಲ್ಲಿ ಏನಾಗಿದೆಯೆಂದರೆ, ಇವರು ಡಾರ್ಕ್ ಏರಿಯಾ ಎಂದು ಪ್ರಕಟಣೆ ಮಾಡಿದ ಮೇಲೂ ಸಹ ಕೆಲವು ಜನರು ಕೊಳವೆ ಬಾವಿಗಳನ್ನು ತೆಗೆಸಿದ್ದಾರೆ. ಅಲ್ಲಿ ಅವರಿಗೆ ನೀರು ಸಿಕ್ಕಿದೆ. ಇಂತಹ ಸಂದರ್ಭದಲ್ಲಿ ಸಾಲ ಕೊಡಲಿಕ್ಕೆ ಸರ್ಕಾರ ಏನಾದರೂ ಪ್ರಯತ್ನ ಮಾಡುತ್ತಿದೆಯೇ? ಈಗ ಸಾಲ ಕೊಡುತ್ತಿಲ್ಲ, ಪಂಪ್‌ಸೆಟ್ಟುಗಳಿಗೂ ಸಾಲ ಕೊಡುತ್ತಿಲ್ಲ. ಆದ್ದರಿಂದ ರೈತರಿಗೆ ಸಾಲ ಕೊಡಿಸಲಿಕ್ಕೆ ತಾವು ಆಲೋಚನೆ ಮಾಡುತ್ತೀರಾ?

ಶ್ರೀ ಬಿ. ಶಿವಣ್ಣ:- ಡಾರ್ಕ್ ಏರಿಯಾ ಎಂದು ಡಿಕ್ಲೇರ್ ಮಾಡಿದಮೇಲೆ ಈಗ ಇವರು ಹೇಳುತ್ತಾರೆ. ಅಲ್ಲಿ ಕೆಲವು ಕೊಳವೆ ಬಾವಿಗಳು ತೆಗೆದಿದ್ದಾರೆಂದು ಆದರ ಆಧಾರದ ಮೇಲೆ ನಾವು ಬ್ಯಾಂಕ್‌ಗಳಿಗೆ ಸಾಲ ಕೊಡಿ ಎಂದು ಬರೆಯುವುದಕ್ಕಾಗುವುದಿಲ್ಲ. Unless we get it re-examined and departmental recommendations are received, ಇಲಾಖೆಯಿಂದ ರೆಕಮೆಂಡೆಷನ್ ಬಂದರೆ, ಸಾಧ್ಯವಾಗುತ್ತದೆ, ಇಲ್ಲದೆ ಇದ್ದರೆ ನಾವು ಅವರಿಗೆ ಸಾಲ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ:- ರೈತರು ಕೊಳವೆ ಬಾವಿ ತೆಗೆಸಿದಾಗ ನೀರು ಬಿದ್ದಿದೆ. ಇಂತಹ ಸಂದರ್ಭದಲ್ಲಿ ಪಂಪ್‌ಸೆಟ್ಟುಗಳಿಗೆ ಸಾಲ ಒದಗಿಸುವ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಾರೆಯೇ? ಈಗ ಇಂತಹ ಕಡೆಗಳಲ್ಲಿಯೂ ರೈತರಿಗೆ ಸಾಲ ಸಿಗುತ್ತಿಲ್ಲ.

ಶ್ರೀ ಬಿ. ಶಿವಣ್ಣ:- ಇದನ್ನು ರೀ ಎಕ್ಸಾಮಿನ್ ಮಾಡಿ, ಡಿಪಾರ್ಟ್‌ಮೆಂಟಿನಿಂದ ರಿಪೋರ್ಟ್ ಬರುವ ತನಕ ನಾವು ಸಾಲ ಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ಮನೋಹರ್ ಐನಾಪುರ್:- ನಾನು ಸಹ ಇದರ ಬಗ್ಗೆ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ.

ಅಧ್ಯಕ್ಷರು:- ಇದು ಮೊಳಕಾಲ್ಮೂರುಗೆ ಸಂಬಂಧಪಟ್ಟಿದ್ದು. ನಿಮ್ಮ ಪ್ರಶ್ನೆ ಬಂದಾಗ ನೀವು ಕೇಳಿ.

MR. SPEAKER:- What has happened to Mr.Venkatesh? 3-4 ದಿವಸದಿಂದ ಅವರು ಸಭೆಗೆ ಬಂದಿಲ್ಲ, ಅವರ ವೇರ್ ಎಬೌಟ್ಸ್ ಗೊತ್ತಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರೆ ನಿಮಗೆ ಏನಾದರೂ ಗೊತ್ತಿದೆಯೇ?

ಶ್ರೀ ವಾಟಾಳ್ ನಾಗರಾಜ್:- ಶ್ರೀ ವೆಂಕಟೇಶ್‌ರವರು, ಶ್ರೀ ಶಿವರಾಮೇಗೌಡರು ಎಲ್ಲಾ ನನ್ನ ಸ್ನೇಹಿತರೇ, ಯಾರನ್ನೂ ಬಿಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು:- ಬಸ್ ಬರುವುದು ನಿಧಾನವಾಗಿದೆಯೆಂದು ಅವತ್ತು ಹೇಳಿದರಿ, ಇನ್ನೂ ಆ ಬಸ್ ಬಂದಿಲ್ಲವೆ?

ಶ್ರೀ ವಾಟಾಳ್ ನಾಗರಾಜ್:- ಅದು ಕಾಡು ಸ್ವಾಮಿ, ಅವರು ಎಲ್ಲಿ ಹೋಗಿ ಸಿಕ್ಕಿ ಹಾಕಿಕೊಂಡಿದ್ದಾರೊ ಗೊತ್ತಿಲ್ಲ;

ಅಧ್ಯಕ್ಷರು:- ಶ್ರೀ ರಾಮಲಿಂಗರೆಡ್ಡಿ ಅವರು ಮತ್ತು ರೇವಣ್ಣ ನವರು ಸಭೆಯಲ್ಲಿ ಹಾಜರಿಲ್ಲ. ಈಗ ಖುಮರುಲ್ ಇಸ್ಲಾಂ ಅವರು 1706ನೇ ಪ್ರಶ್ನೆ ಕೇಳಬಹುದು.

ಕಾಜಾ ಬಂಡನವಾಜ ದರ್ಗಾದ ಸಜ್ಜದಾ ನಷ್ಟೀನ್ ಅವರು ದರ್ಗಾದ ನೌಕರರನ್ನು ಕೆಲಸದಿಂದ ತೆಗೆಯುವುದರ ಬಗ್ಗೆ.

1706 ಶ್ರೀ ಖುಮರುಲ್ ಇಸ್ಲಾಂ, (ಗುಲ್ಬರ್ಗಾ):- ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಕಾಜಾ ಬಂಡನವಾಜ ದರ್ಗಾದ ಸಜ್ಜದಾ ನಷ್ಟೀನ್ ಅವರು ದರ್ಗಾದ ವಂಶಪಾರಂಪರ್ಯವಾಗಿ ಬರುವ ನೌಕರರನ್ನು ಕೆಲಸದಿಂದ ತೆಗೆದುಹಾಕಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಯಾವ ಕಾನೂನಿನ ಪ್ರಕಾರ ವಂಶಪಾರಂಪರ್ಯವಾಗಿ ಬಂದಿರುವ ನೌಕರರಿಗೆ ಕೆಲಸದಿಂದ ತೆಗೆದುಹಾಕಲಾಗಿದೆ;

ಇ) ಹಜರತ್ ಕಾಜಾ ಬಂಡನವಾಜಾ ದರ್ಗಾದ ಸಜ್ಜದಾ ನಷ್ಟೀನ್ ಅವರು ನಜ್ರಾನವನ್ನು ತೆಗೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸಜ್ಜದಾ ನಷ್ಟೀನ್ ಅವರು ಸಾದಾತ್ ಆಗಿರುವುದರಿಂದ ಶರೀಯತ್‌ನ ಪ್ರಕಾರ ನಜ್ರಾನವನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆಯೇ;

ಈ) ಹಾಗಿದ್ದಲ್ಲಿ ಸರ್ಕಾರವು ತೆಗೆದುಕೊಂಡು ಕ್ರಮವೇನು;

ಉ) ಈ ಹಂತದಲ್ಲಾದರೂ ಸರ್ಕಾರವು ದರ್ಗಾದ ಸಜ್ಜದಾ ನಷ್ಟೀನ್ ಅವರಿಗೆ "ಶರಿಯತ್"ನ ಪ್ರಕಾರ ನಜ್ರಾನವನ್ನು ತೆಗೆದುಕೊಳ್ಳುತ್ತಿರುವುದನ್ನು ನಿಲ್ಲಿಸುವಂತೆ ಆದೇಶವನ್ನು ನೀಡುವುದೇ, ಹಾಗೂ ದರ್ಗಾದ ನೌಕರರಿಗೆ ನಜ್ರಾನವನ್ನು ತೆಗೆದುಕೊಳ್ಳಲು ಅನುಮತಿಯನ್ನು ನೀಡಲಾಗುವುದೆ?

ಶ್ರೀ ಎಸ್.ಎಂ. ಯೂಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು):-

ಅ) ದರ್ಗಾದ ನೌಕರಿಯು ವಂಶಪಾರಂಪರ್ಯವಾಗಿ ಬಂದಿರುವುದೆಂದು ಪರಿಗಣಿಸಲು ಆಗುವುದಿಲ್ಲ. ಆದುದರಿಂದ ಸಜ್ಜದಾ ನಷ್ಟೀನ್ ಅವರು ಮಾಲೀಕ ಹಾಗೂ ನೌಕರರ ಮಧ್ಯೆ ಸಂಬಂಧ ಬಗ್ಗೆ ಸಾಮಾನ್ಯ ಪರಂಪರೆಯ ಮೇರೆಗೆ ಕೆಲಸದಿಂದ ತೆಗೆದುಹಾಕಿರುವುದು ತಪ್ಪೆಂದು ಪರಿಗಣಿಸಲು ಸಾಧ್ಯವಿಲ್ಲ.

ಆ) ಇದು ವಂಶಪಾರಂಪರ್ಯವಾದುದಲ್ಲ.

ಇ) ಈ ವಿಷಯದಲ್ಲಿ "ಉಲೇಮಾ" ಅವರು ನೀಡಿರುವ ತೀರ್ಪಿನ ಪ್ರಕಾರ ಸಜ್ಜದಾ ನಷ್ಟೀನ್ "ಸಾದಾತ್" ಆಗಿದ್ದರೂ ಸಹ "ನಜ್ರಾನವನ್ನು" ತೆಗೆದುಕೊಳ್ಳಬಹುದು.

ಈ) ಉದ್ಭವಿಸುವುದಿಲ್ಲ.